ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಸಿ4(7)ಪ್ರಾ.ಶಿ&ಪ್ರೌ.ಶಾ.ಶಿ.ವರ್ಗ/01/2012-13 ದಿನಾಂಕ 25-05-2012

**<u>ಸೂಚನೆ</u>**

**<u>ವರ್ಗಾವಣೆ ಬಯಸುವ ಪ್ರಾಥಮಿಕ ಶಾಲಾ ಶಿಕ್ಷಕರ ಗಮನಕ್ಕೆ</u>**

1. ದಿನಾಂಕ: 16.05.2012 ರಂದು ನೀಡಿದ್ದ ವೇಳಾಪಟ್ಟಿಯಂತೆ ಕೌನ್ಸಿಲಿಂಗ್ ಅನ್ನು ತಾಂತ್ರಿಕ ಕಾರಣಗಳಿಂದ ನಡೆಸಲು ಸಾಧ್ಯವಾಗುತ್ತಿಲ್ಲ.
   ಆದ್ದರಿಂದ ನಾಳೆ ಅಂದರೆ ದಿನಾಂಕ: 26.05.2012 ರಂದು ದಿನಾಂಕ 25.05.2012 ರಂದು ಕೌನ್ಸಿಲಿಂಗ್ ಮಾಡದಿರುವ ಶಿಕ್ಷಕರು ಹಾಗೂ ಕ್ರಮ ಸಂಖ್ಯೆ 3701 ರಿಂದ 4000 ವರೆಗಿನ ಪ್ರಾಥಮಿಕ ಶಾಲಾ ಸಹಶಿಕ್ಷಕರು ಮಾತ್ರ ಸಂಬಂಧಿಸಿದ ವರ್ಗಾವಣೆ ಕೇಂದ್ರಗಳಲ್ಲಿ ಬೆಳಿಗ್ಗೆ 09.00 ಗಂಟೆಗೆ ವರ್ಗಾವಣೆ ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚಿಸಿದೆ. ಮುಂದಿನ ಕ್ರಮಸಂಖ್ಯೆಯ ವಿವರಗಳನ್ನು ನಾಳೆ ಸಾಯಂಕಾಲ ಅಂದರೆ ದಿನಾಂಕ: 26.05.2012 ರಂದು ಇಲಾಖೆಯ ವೆಬ್-ಸೈಟ್‌ನಲ್ಲಿ ಪ್ರಕಟಿಸಲಾಗುವುದು.
2. ವಿವಾಹಿತ ಪ್ರಕರಣಗಳಲ್ಲಿ ಆದ್ಯತೆ ಕೋರಿ ಅರ್ಜಿ ಸಲ್ಲಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರು ಜಿಲ್ಲಾ ಜೇಷ್ಠತೆ ಹೊಂದಿದ್ದಲ್ಲಿ (ಜಿಲ್ಲಾ ಉಪನಿರ್ದೇಶಕರಿಂದ ನೇಮಕಾತಿ ಆದೇಶ ಪಡೆದವರು) ಸಂಗಾತಿ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಜಿಲ್ಲೆಯ ವ್ಯಾಪ್ತಿಯಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ. ಬ್ಲಾಕ್ ಜೇಷ್ಠತೆ ಹೊಂದಿದ್ದಲ್ಲಿ (ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ನೇಮಕಾತಿ ಆದೇಶ ಪಡೆದವರು) ಸಂಗಾತಿ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಬ್ಲಾಕ್ ವ್ಯಾಪ್ತಿಯಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ.
3. ಮುಖ್ಯ ಶಿಕ್ಷಕರ, ಪದವೀದರೇತರ ಮುಖ್ಯಶಿಕ್ಷಕರ ಮತ್ತು ವಿಶೇಷ ಶಿಕ್ಷಕರ ವರ್ಗಾವಣಾ ಕೌನ್ಸಿಲಿಂಗ್ ದಿನಾಂಕವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

25-05-12

ನಿರ್ದೇಶಕರು (ಪ್ರೌಢಶಿಕ್ಷಣ) ಹಾಗೂ

ವರ್ಗಾವಣಾ ಪ್ರಾಧಿಕಾರಿಗಳು

ಮೈಸೂರು ವಿಭಾಗ